# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (439)-386 |
| 3 | ಉತ್ತರಿಸಬೇಕಾದ ದಿನಾಂಕ | : | 30-01-2026 |
| 4 | ಉತ್ತರಿಸುವವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮನರೇಗಾ ಯೋಜನೆಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನ ಎಷ್ಟು; (2014 ರಿಂದ 2025ರ ವರೆಗೆ ವಾರ್ಷಿಕವಾರು ಮಾಹಿತಿ ಒದಗಿಸುವುದು)</td><td>ಮಹಾತ್ಮಾಗಾಂಧಿ ನರೇಗಾ ಯೋಜನೆಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ
<table>
<tr><th>ವರ್ಷವಾರು</th><th>ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ವಿವರ (ರೂ.ಕೋಟಿಗಳಲ್ಲಿ)</th></tr>
<tr><td>2014-15</td><td>1569.68</td></tr>
<tr><td>2015-16</td><td>997.07</td></tr>
<tr><td>2016-17</td><td>1350.46</td></tr>
<tr><td>2017-18</td><td>2759.39</td></tr>
<tr><td>2018-19</td><td>2748.78</td></tr>
<tr><td>2019-20</td><td>3349.00</td></tr>
<tr><td>2020-21</td><td>5691.75</td></tr>
<tr><td>2021-22</td><td>5732.42</td></tr>
<tr><td>2022-23</td><td>6352.84</td></tr>
<tr><td>2023-24</td><td>5415.06</td></tr>
<tr><td>2024-25</td><td>5694.73</td></tr>
<tr><td>2025-26</td><td>3527.25</td></tr>
</table>
(2014-15 to 2024-25 ರ ಆಡಿಟ್ ವರದಿಯನ್ವಯ 2025-26 ಬ್ಯಾಂಕ್ ಮತ್ತು ಕೆ-2 ಬಿಡುಗಡೆ ರೀತ್ಯಾ)</td></tr>
<tr><td>ಆ)</td><td>ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಇದುವರೆಗೂ ಬರಬೇಕಾದ ಬಾಕಿ ಅನುದಾನ ಎಷ್ಟು; ಮನರೇಗಾ ಕಾಮಗಾರಿಗಳಿಗೆ ರಾಜ್ಯದಿಂದ ಪಾವತಿಸಬೇಕಾದ ಬಾಕಿ ಅನುದಾನ ಎಷ್ಟು;</td><td>ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನರೇಗಾ ತಂತ್ರಾಂಶದ ಎಂಐಎಸ್ ವರದಿ ಪ್ರಕಾರ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಇದುವರೆಗೂ ಬರಬೇಕಾದ ಬಾಕಿ ಅನುದಾನ:815.31 ಕೋಟಿರೂ.ಗಳು ರಾಜ್ಯದಿಂದ ಪಾವತಿಸಬೇಕಾದ ಬಾಕಿ ಅನುದಾನ: 268.63 ಕೋಟಿ ರೂ.ಗಳು</td></tr>
<tr><td>ಇ)</td><td>ಮನರೇಗಾ ಯೋಜನೆಯಡಿ ಅಕ್ರಮ ಎಸಗಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಪ್ರಕರಣಗಳಿಗೆ ಕ್ರಮ ಕೈಗೊಳ್ಳಲಾಗಿದೆ;</td><td>ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ 2017-18 ರಿಂದ ಎಂಐಎಸ್ ತಂತ್ರಾಂಶದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನಾ ವರದಿ ಲಭ್ಯವಿದ್ದು, ಅದರಂತೆ 2017-18 ರಿಂದ 2024-25ನೇ ಸಾಲಿನ ವರೆಗೆ ಸಾಮಾಜಿಕ ಪರಿಶೋಧನಾ ವರದಿಯಲ್ಲಿ 103616 ಪ್ಯಾರ/ಪ್ರಕರಣಗಳಲ್ಲಿ ವಸೂಲಾತಿಗೆ ಸೂಚಿಸಿದ ಮೊತ್ತ ರೂ.218.82 ಕೋಟಿ ಗಳಾಗಿದ್ದು, ಈ ಪ್ರಕರಣದಲ್ಲಿ ಅಡ್‌ಹಾಕ್ ಸಮಿತಿಯು 60612 ಪ್ರಕರಣಗಳನ್ನು ಇತ್ಯರ್ಥ ಪಡಿಸಿ 43004 ಪ್ರಕರಣಗಳಿಗೆ ಮಾತ್ರ ವಸೂಲಾತಿಗೆ</td></tr>
</table>

| | | |
|---|---|---|
| | | ಸೂಚಿಸಿರುವ ಮೊತ್ತ ರೂ.44.87ಕೋಟಿಗಳು, ವಸೂಲಾತಿಗೆ ಸೂಚಿಸಿರುವ ಮೊತ್ತದಲ್ಲಿ ಈಗಾಗಲೇ ರೂ.42.87 ಕೋಟಿಗಳನ್ನು ವಸೂಲಾತಿ ಮಾಡಲಾಗಿದೆ. ವಸೂಲಾತಿಯು ಶೇ.95.53 ಇರುತ್ತದೆ. |
| ಈ) | ಮನರೇಗಾ ಯೋಜನೆ ಅಡಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಇಲ್ಲಿಯವರೆಗೆ ವೇತನ ಹಾಗೂ ಪ್ರಯಾಣ ಭತ್ಯೆ ನೀಡಲಾಗಿದೆಯೇ? (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ ಆಡಳಿತಾತ್ಮಕ ಅನುದಾನವು ಸಂಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುತ್ತಿದ್ದು, ಜಿಲ್ಲೆಗಳಿಗೆ ದಿನಾಂಕ 13-06-2025, 14-07-2025 ಹಾಗೂ 11-10-2025 ರಂದು ಒಟ್ಟು ರೂ.164.39 ಕೋಟಿಗಳ ಅನುದಾನವನ್ನು ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಮತ್ತು ಪ್ರಯಾಣ ಭತ್ಯೆಗೆ ಸೆಪ್ಟೆಂಬರ್ ತಿಂಗಳವರೆಗೆ ಬಿಡುಗಡೆಗೊಳಿಸಲಾಗಿರುತ್ತದೆ.<br>ಎರಡನೇ ಕಂತಿನ ಅನುದಾನವು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ 02-01-2026 ರಂದು ಬಿಡುಗಡೆಯಾಗಿದ್ದು, ಜಿಲ್ಲೆಗಳಿಗೆ ದಿನಾಂಕ 27-01-2026 ರಂದು ರೂ. 66.82 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. |

**ಸಂಖ್ಯೆ: ಗ್ರಾಅಪ/40(18)/ಉಖಾಯೋ/2026, 2037839**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು